# ಜಿಲ್ಲಾ ನಿರ್ಮಿತಿ ಕೇಂದ್ರ, ಚಿಕ್ಕಬಳ್ಳಾಪುರ.

(ಕರ್ನಾಟಕ ಸರ್ಕಾರದ ಪ್ರಾಯೋಜಿತ)

ಸಂಖ್ಯೆ: ಜಿನಿಕೇ/ಆಡಳಿತ/ಸಿಬ್ಬಂದಿ/ನೇಮಕಾತಿ/ 603 /2022-23

ದಿನಾಂಕ:29.10.2022.

## ಸಿಬ್ಬಂದಿ ನೇಮಕಾತಿ ಪ್ರಕಟಣೆ

(ಗುತ್ತಿಗೆ ಆಧಾರದಲ್ಲಿ)

ಚಿಕ್ಕಬಳ್ಳಾಪುರ ಜಿಲ್ಲಾ ನಿರ್ಮಿತಿ ಕೇಂದ್ರಕ್ಕೆ ಅವಶ್ಯಕವಿರುವ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಈ ಕೆಳಕಂಡ ಖಾಲಿ ಇರುವ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅರ್ಜಿಯನ್ನು ಮತ್ತು ಸಂಬಂಧಿಸಿದ ದಾಖಲೆಗಳನ್ನು ಸ್ವಯಂ ದೃಢೀಕೃತ ದಾಖಲಾತಿಗಳೊಂದಿಗೆ ಈ ಕಛೇರಿ ಇ-ಮೇಲ್ ವಿಳಾಸ:pmcbnk@yahoo.co.in.ಗೆ ದಿನಾಂಕ:-18/11/22ರ ಸಮಯ ಸಂಜೆ:5.00ಗಂಟೆ ಒಳಗಾಗಿ ಸಲ್ಲಿಸಬಹುದಾಗಿರುತ್ತದೆ.

| ಕ್ರ ಸ | ಹುದ್ದೆಯ ಹೆಸರು | ಹುದ್ದೆ ಸಂಖ್ಯೆ | ವಿದ್ಯಾರ್ಹತೆ | ಅನುಭವ | ವಯೋಮಿತಿ/ ವೇತನ ಶ್ರೇಣಿ | ಕರ್ತವ್ಯದ ವಿವರಗಳು |
|---|---|---|---|---|---|---|
| 1 | ಲೆಕ್ಕಿಗರು | 01 | ಬಿ.ಕಾಂ/ ಎಂ.ಕಾಂ/ ಎಂ.ಬಿ.ಎ ಪದವೀಧರ ರಾಗಿರಬೇಕು | ಕನಿಷ್ಠ 3 ವರ್ಷಗಳು ಸಂಘ ಸಂಸ್ಥೆಗಳಲ್ಲಿ ಲೆಕ್ಕಶಾಖೆಯಲ್ಲಿ ಕಾರ್ಯನಿರ್ವಹಿಸಿರುವ ಅನುಭವವಿರಬೇಕು. | ಗರಿಷ್ಠ 35 ವರ್ಷಗಳು/ ಮಾಸಿಕ ವೇತನ negotiable | ★ಶಾಸನಾತ್ಮಕ ತೆರಿಗೆಗಳಾದ ಜಿಎಸ್‌ಟಿ, ಟಿಡಿಎಸ್, ಇಪಿಎಫ್, ಇಎಸ್‌ಐ ಮತ್ತು ವೃತ್ತಿ ತೆರಿಗೆ ರಿಟರ್ನ್ಸ್ ಅನುಭವವಿರ ಬೇಕು. ★ಲೆಕ್ಕಪತ್ರಗಳ ಕಡತಗಳನ್ನು ನಿಭಾಯಿಸುವ ಅನುಭವವಿರಬೇಕು. ★ಕಾಮಗಾರಿಗಳ ಕಡತ ಪರಿಶೀಲನೆ, ಆದಾಯ ತೆರಿಗೆ ಮತ್ತು ಜಿಎಸ್‌ಟಿ ತೆರಿಗೆಗಳ ಮಾಹಿತಿವುಳ್ಳವರಾಗಿಬೇಕು. ★ಲೆಕ್ಕಪರಿಶೋಧಕರಿಗೆ ಸಹಾಯ ಮಾಡುವುದು. |
| 2 | ಗಣಕಯಂತ್ರ ನಿರ್ವಾಹಕರು | 01 | ಯಾವುದೇ ಪದವೀಧರ ರಾಗಿರಬೇಕು. | ಕಂಪ್ಯೂಟರ್ ಜ್ಞಾನವುಳ್ಳವರಾಗಿರಬೇಕು. ಕನಿಷ್ಠ 3 ವರ್ಷಗಳು ಗಣಕಯಂತ್ರ ನಿರ್ವಹಣೆಯಲ್ಲಿ ಕಾರ್ಯನಿರ್ವಹಿಸಿರುವ ಅನುಭವವಿರಬೇಕು. | ಗರಿಷ್ಠ 35 ವರ್ಷಗಳು/ ಮಾಸಿಕ ವೇತನ ರೂ.15,000/- | ★ ಕನ್ನಡ ಮತ್ತು ಆಂಗ್ಲ ಬಾಷೆಯಲ್ಲಿ ಬೆರಳಚ್ಚು ಮಾಡಬೇಕಿರುತ್ತದೆ. ★ ಕಛೇರಿ ಪತ್ರ ವ್ಯವಹಾರಗಳ ಅನುಭವವಿರಬೇಕು. ★ ಸರ್ಕಾರಿ ಕಛೇರಿಗಳಲ್ಲಿ ಕಾರ್ಯ ನಿರ್ವಹಿಸಿರುವವರಿಗೆ ಪ್ರಾಮುಖ್ಯತೆ ನೀಡಲಾಗುವುದು. |

ಷರತ್ತುಗಳು:-

1. ಅಭ್ಯರ್ಥಿಗಳು ಭಾರತೀಯರಾಗಿರಬೇಕು
2. ಅಭ್ಯರ್ಥಿಯ 10ನೇ ತರಗತಿ ಅಂಕಪಟ್ಟಿ (ವಯಸ್ಸಿನ ದೃಢೀಕರಣಕ್ಕೆ) ಹಾಗೂ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ (Resume, Marks Cards & Experience Letter) ಅನುಭವ ಪ್ರಮಾಣ ಪತ್ರಗಳನ್ನು ಹಾಗೂ ಒಂದು ಭಾವಚಿತ್ರ ಮತ್ತು ಆಧಾರ್ ಜೆರಾಕ್ಸ್ ಪ್ರತಿಯನ್ನು ಅರ್ಜಿಯೊಂದಿಗೆ ದೃಢೀಕರಿಸಿ ಲಗತ್ತಿಸಿ ಸಲ್ಲಿಸುವುದು.
3. ಸರ್ಕಾರಿ ಕಛೇರಿಗಳಲ್ಲಿ ಕಾರ್ಯನಿರ್ವಹಿಸಿರುವವರಿಗೆ ಪ್ರಾಮುಖ್ಯತೆ ನೀಡಲಾಗುವುದು.
4. ಸೂಕ್ತ ಲಗತ್ತುಗಳಿಲ್ಲದ ಅರ್ಜಿಗಳನ್ನು ಮತ್ತು ನಿಗಧಿಪಡಿಸಿದ ಸಮಯ ಮೀರಿ ಬಂದ ಅರ್ಜಿಗಳನ್ನು ಯಾವುದೇ ಸೂಚನೆಗಳಿಲ್ಲದೇ ತಿರಸ್ಕರಿಸಲಾಗುವುದು.
5. ಅಂತಿಮ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳ್ಳುವ ಮುನ್ನ ಯಾವುದೇ ಕಾರಣ ನೀಡದೆ ಈ ನೇಮಕಾತಿ ಪ್ರಕ್ರಿಯೆಯನ್ನು ಮುಂದೂಡುವ ಅಥವಾ ರದ್ದುಗೊಳಿಸುವ ಸಂಪೂರ್ಣ ಹಕ್ಕನ್ನು ಆಯ್ಕೆ ಸಮಿತಿ ಹೊಂದಿರುತ್ತದೆ.
6. ಒಂದೇ ಅಭ್ಯರ್ಥಿಯು ಎರೆಡು ಹುದ್ದೆಗಳಿಗೆ ಅರ್ಜಿಯನ್ನು ಸಲ್ಲಿಸುವಾಗ ಪ್ರತ್ಯೇಕವಾಗಿ ಅರ್ಜಿಗಳನ್ನು ಸಲ್ಲಿಸುವುದು.
7. ಅರ್ಜಿಗಳನ್ನು ಕಛೇರಿ ಇ-ಮೇಲ್ ಐಡಿ ಮೂಲಕ ಸಲ್ಲಿಸುವುದು. (ಖುದ್ದಾಗಿ/ಅಂಚೆ ಮೂಲಕ/ಕೊರಿಯರ್ ಮೂಲಕ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ).
8. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:-18/11/22ರ ಸಾಯಂಕಾಲ 5:00ಗಂಟೆ ನಂತರ ಬರುವ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
9. ಹುದ್ದೆಗಳಿಗೆ ಸ್ವೀಕರಿಸುವ ಅರ್ಜಿಗಳನ್ನು 1:10ರ ಪ್ರಮಾಣದಂತೆ ಶೋಧನೆಮಾಡಿ, ಪರಿಶೀಲಿಸಿ ನಂತರ ಅಭ್ಯರ್ಥಿಗಳಿಗೆ ಸಂದರ್ಶನದ ಬಗ್ಗೆ ಸೂಚಿಸಲಾಗುವುದು.
10. ಆಯ್ಕೆಯಾದ ಅಭ್ಯರ್ಥಿಗಳು ಸುಳ್ಳು ಪ್ರಮಾಣ ಪತ್ರಗಳನ್ನು ನೀಡಿರುವುದು ದೃಢಪಟ್ಟಲ್ಲಿ ಸಂಸ್ಥೆಯು ಅಂತಹ ಅಭ್ಯರ್ಥಿಗಳ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಲಾಗುವುದು.
11. ಸಂದರ್ಶನಕ್ಕೆ ಹಾಜರಾಗುವ ಅಭ್ಯರ್ಥಿಗಳಿಗೆ ಯಾವುದೇ ಸಾರಿಗೆ ವೆಚ್ಚ ನೀಡಲಾಗುವುದಿಲ್ಲ
12. ಅನುಭವ ಪ್ರಮಾಣ ಪತ್ರವು ಸಂಬಂಧಿಸಿದ ಹಾಗೂ ನಿಖರವಾದ ಪ್ರಾಧಿಕಾರದಿಂದ ಪಡೆದಿರತಕ್ಕದ್ದು.
13. ಅಭ್ಯರ್ಥಿಗಳ ಆಯ್ಕೆ ಸಮಿತಿಯು ನೆಡೆಸುವ ವಿದ್ಯಾರ್ಹತೆ/ಅನಿಭವದ ಆಧಾರದ ಮೇಲೆ ಸಂದರ್ಶನ ನೆಡೆಸಿ ಆಯ್ಕೆ ಪಟ್ಟಿಯನ್ನು ಘೋಷಿಸಲಾಗುವುದು, ಆಯ್ಕೆಯಾದ ನಂತರ ಷರತ್ತುಬದ್ಧ ಒಡಂಬಡಿಕೆಯಂತೆ ಕರ್ತವ್ಯ ನಿರ್ವಹಿಸುವುದು.
14. ಹೆಚ್ಚಿನ ವಿವರಗಳಿಗೆ ಕಛೇರಿಯ ಸಮಯದಲ್ಲಿ ದೂರವಾಣಿ ಸಂಖ್ಯೆ :-08156-295080ಗೆ ಸಂಪರ್ಕಿಸುವುದು